Sri VEERENDRA PATIL (Chief Minister).—I do not know what adjournment motion the hon. member has moved. I did not receive a copy of it to enable me to make a statement. If I get a copy of it I will make a statement.

Mr. SPEAKER.—Yes.

Expenditure incurred for Bangalore University Convocation held at Glass House, Bangalore

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸಭಾಪತಿಯವರೇ, ಈ ವಿಶ್ವವಿದ್ಯಾನಿಲಯದ ಬಗ್ಗೆ ನನಗೆ ಭಾರಿ ದುಃಖವಾಗುತ್ತಿದೆ. ಇದು ನರಸ್ವತಿ ಪೀಠ. ಇಂಥ ಒಂದು ಜರ್ಜಿಗೆ ಇಲ್ಲಿ ಅವಕಾಶವಾಗಬಾರದು. ಇದು ನರಿಯೋ, ತಪ್ಪೋ ವಿಶ್ವವಿದ್ಯಾನಿಲಯದವರು ನಡೆಸಿದಂತಹ ಘಟಿಕೋತ್ಸವದ ಬಗ್ಗೆ.....

ಅಧ್ಯಕ್ಷರು—ಅದೆಲ್ಲಬೇಡ, ನೋಟೀಸು ಓದಿದರೆ ಸಾಕು.

ಶ್ರೀ ಎಚ್. ಎನ್. ನಂಜೇ ಗೌಡ.—ಅದೇ ಸ್ವಾಮಿ ನಾನು ಹೇಳುತ್ತಿದ್ದೇನೆ. ಇದೆಲ್ಲಾ ಪತ್ರಿಕೆಯಲ್ಲೂ ಬಂತು. ಜನತೆ ಇದು ನಿಜವೋ, ಸುಳ್ಳೊ ಎಂಬ ಅನುಮಾನದಿಂದ ನೋಡುತ್ತಿದ್ದಾರೆ. ಈ ಸಂಶಯವನ್ನು ಪರಿಹಾರ ಮಾಡಿದರೆ, ಶಾಂತಿ ಬರುತ್ತದೆ. ಈ ನರಸ್ವತಿ ಪೀಠದಲ್ಲಿ ದುರುಪಯೋಗವಾಗಿದೆ ಎಂಬುದು ಪತ್ರಿಕೆಯಲ್ಲಿ ಎಲ್ಲಾ ಬಂತು, ಅದರಲ್ಲೂ ಸಂಪಾದಕರ ಪತ್ರದಲ್ಲೂ ಬಂತು. ಆದ್ದರಿಂದ ನಿಜಸಂಗತಿ ಏನಾಗಿದೆ ಎಂದು ತಿಳಿಯಲು ಇದನ್ನು ಸೆಕ್ಷನ್ 8 ರ ಪ್ರಕಾರ ವಿಜಿಲೆನ್ಸ್ ಕಮಿಷನರಿಗೆ ಒಪ್ಪಿಸದೆ ಹೋದರೆ, ಈ ಅನುಮಾನ ಬಗೆಹರಿಯುವುದಿಲ್ಲ; ಆ ಅನುಮಾನ ಹಾಗೇ ಉಳಿಯುತ್ತದೆ. ಉಪಕುಲಪತಿಗಳು ಹೇಳುವ ಅಂಕಿ ಅಂಶಗಳು ಕೂಡ ನಮಗೆ ಅನುಮಾನವನ್ನು ಬಗೆಹರಿಸುವುದಿಲ್ಲ. ಇದು ಬರೆ ತಪ್ಪಾಗುತ್ತದೆ, ಕೋಲಾಹಲ ಉಂಟುಮಾಡುತ್ತದೆ, ಆದ್ದರಿಂದ ಇದನ್ನು ವಿಜಿಲೆನ್ಸ್ ಕಮಿಷನಿಗೆ ಹಾಕಿ ವಿಚಾರಣೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಗಾಜಿನ ಮನೆಯಲ್ಲಿ ನಡೆದಂತಹ ಘಟಿಕೋತ್ಸವದ ಸಂದರ್ಭದಲ್ಲಿ ಏನೇನು ನಡೆಯಿತು, ಅದನ್ನು ಕೂಲಂಕಷವಾಗಿ ತಿಳಿಯದೆ, ವಿಶ್ವವಿದ್ಯಾನಿಲಯದ ಬಗ್ಗೆ ಮಾನ್ಯ ಸದಸ್ಯರಾದಂತಹ ಶ್ರೀ ಎಚ್. ಎನ್. ನಂಜೇಗೌಡರು ದುಃಖ ಪಡತಕ್ಕಂತದ್ದು ಸರಿಯಿಲ್ಲವೆಂದು ನಾನು ಹೇಳುತ್ತೇನೆ. ದುಃಖಪಡತಕ್ಕ ಪ್ರಸಂಗ ವಿಶ್ವವಿದ್ಯಾನಿಲಯದಲ್ಲಿ ಏನೂ ನಡೆಯಲಿಲ್ಲ. ಅಲ್ಲಿ ನಡೆಯತಕ್ಕ ಕೆಲಸಗಳು ಹೆಮ್ಮೆ ಪಡತಕ್ಕ ಕೆಲಸಗಳು ಎಂದು ಹೇಳುವುದಕ್ಕೆ ನನಗೆ ಹೆಮ್ಮೆಯಾಗುತ್ತದೆ. ವಿಶ್ವವಿದ್ಯಾನಿಲಯ ನಡೆಸಿದಂತಹ ಘಟಿಕೋತ್ಸವದ ಸಂದರ್ಭದಲ್ಲಿ ಫರ್ನಿಚರ್ ಮತ್ತು ಇದರ ವಿಚಾರದಲ್ಲಿ ಬಂದಂತಹ ಪ್ರೆಸ್ ವರದಿಗಳನ್ನು ಓದಿಕೊಂಡು ಶ್ರೀಮಾನ್ ನಂಜೇಗೌಡರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಅದರಲ್ಲಿ ಬಂದಿರತಕ್ಕ ಅನೇಕ ವಿಷಯಗಳು ಸತ್ಯಕ್ಕೆ ದೂರವಾಗಿದೆ ಎಂಬುದನ್ನು ಹೇಳುತ್ತೇನೆ. ಫರ್ನಿಚರಿಗೆ 45 ಸಾವಿರ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾಗಿದೆ. ಖರ್ಚು ಮಾಡಿರತಕ್ಕದ್ದು 16 285 ರೂಪಾಯಿ. ಅದನ್ನು ಕೂಡ ಸೀಲ್ಡ್ ಟೆಂಡರ್ ಕರೆದು, ಟೆಂಡರರ್ ಸಮ್ಮುಖದಲ್ಲಿ ಒಡೆದು, ಅದರಲ್ಲಿ ಬಹಳ ಕಡಿಮೆ ಯಾರು ಕೊಟ್ಟಿದ್ದಾರೆ ಅವರಿಗೆ ಆ ಕಾರ್ಯವನ್ನು ಮಾಡುವುದಕ್ಕೆ ವಹಿಸಿದ್ದಾರೆ. ಬಂದಂತಹ ಟೆಂಡರ್ ನನ್ನ ಹತ್ತಿರ ಇದೆ. ಅದು ಈ ರೀತಿ ಇದೆ:

		Rs.
1. M/s. Janatha Furnishing House	...	16,785-80
2. M/s. Shacoor Brothers	...	16,842-05
3. M/s. Chelva & Co.	...	17,587-30

		Rs.
4.	M/s. Ramaswamy Chetty and Sons ...	18,038-40
5.	M/s. Falcon ...	17,669-80
6.	M/s. Adams ...	18,038-40
7.	M/s. Saleh Ahmed ...	18,726-50

ಅದರಲ್ಲಿ ಅತೀ ಕಡಿಮೆ ಇದ್ದಂತಹ ಟೆಂಡರ್, ಅಂದರೆ, 16,285-80 ರೂಪಾಯಿ ಇದ್ದಂತದ್ದನ್ನು ಒಪ್ಪಿಕೊಂಡಿದ್ದಾರೆ.

7-00 P.M.

ಕಾರ್ಪೆಟ್ಸ್, ಶಾಮಿಯಾನ, ಕನ್ನಾತ್ ಇತ್ಯಾದಿಗಳಿಗೆ 16,285 ರೂಪಾಯಿಗಳು ನಿಜವಾಗಿ ಖರ್ಚಾಗಿದೆ, ಅತ್ಯಂತ ಕಡಿಮೆ ಟೆಂಡರನ್ನು ಒಪ್ಪರಾಯಿತು. ಇದಕ್ಕೆ 40 ಸಾವಿರ ರೂಪಾಯಿಗಳು ಖರ್ಚಾಗಿದೆ ಎಂದು ಹೇಳುವುದು ಸರಿಯಲ್ಲ.

ಆಮೇಲೆ ಡಯಾಸ್ ಫಿಕ್ಸ್ ಮಾಡುವುದಕ್ಕೆ 11 ಸಾವಿರ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದಾರೆ. ಅದು ಸರಿಯಲ್ಲ ಅದಕ್ಕೆ ನಿಜವಾಗಿ ಖರ್ಚಾಗಿರುವುದು 3500 ರೂಪಾಯಿಗಳು ಮಾತ್ರ. ಇದಕ್ಕೂ ಸಹ ಟೆಂಡರು ಕರೆದು ಅತ್ಯಂತ ಕಡಿಮೆ ಟೆಂಡರನ್ನು ಒಪ್ಪರಾಯಿತು. ಮಾನ್ಯ ಸದಸ್ಯರು ಉತ್ಪ್ರೇಕ್ಷೆಮಾಡಿ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿದ್ದಾರೆ. ಅಲ್ಲ ದುಃಖ ಪಡುವಂಥಾದ್ದು ಯಾವುದು ನಡೆದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಆ ರೀತಿ ಮಾತನಾಡಿದ್ದು ಸರಿಯಲ್ಲ. ಇದನ್ನು ವಿಜಿರೆನ್ಸ್‌ಗೆ ಕಳುಹಿಸುವಂಥಾ ಪ್ರಮೇಯ ಏನೂ ಇಲ್ಲ.

Irrigation Projects in Bidar District

† **Sri V. N. PATIL** (Humnabad).—In this august House, on various occasions we have discussed the burning problem, namely, the Godavari issue and Krishna waters issue. Only Bidar District in our State falls in the Godavari basin. But unfortunately no project has come up in Bidar District and no attempt is also made. I feel the Government is adopting an indifferent attitude and have not initiated in Bidar District any development activities or projects in respect of irrigation. It is more than six years back that the Karanji project was enunciated. Even recently in the District Development Council and the District Seminar on the IV Five-Year Plan, five projects, namely, Manjra, Chulkinala, Nagora, Musla and Karanji Projects were suggested. If no technical clearance is given by the Central Government or any other agencies for the Karanji Project, we would request the hon. Chief Minister and the august House to give its full attention to this Project and see that clearance is obtained. At least in the Fourth Plan, these projects may be taken up, funds earmarked for the purpose and works started. All these projects may not cost the Government more than Rs. 20 crores. As Bidar District is the most backward District in the State, it is the prime necessity of this House to give earnest attention to it. I hope the hon. Chief Minister will also do his best to give priority to Karanji and the other four projects.